## ಗಂಗಾ ಕಲ್ಯಾಣ ಯೋಜನೆಯಡಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಮಾರ್ಗ ಸೂಚಿಗಳು:

1. ಸರ್ಕಾರದ ಆದೇಶ ಸಂಖ್ಯೆ: ಸಕಇ 219 ಎಸ್‌ಡಿಸಿ 2015, ದಿನಾಂಕ:20.10.2015ರಲ್ಲಿ ಈ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆಯುವ, ಪಂಪ್ ಮೋಟಾರ್ ಸರಬರಾಜು ಮಾಡಿ ಅಳವಡಿಸುವ ಮತ್ತು ಮೂರನೇ ತಪಾಸಣೆ ಸಂಸ್ಥೆಗಳನ್ನು ಗುರುತಿಸುವ ಟೆಂಡರ್ ಪ್ರಾಧಿಕಾರವನ್ನು ಅಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಪುನರ್ ರಚಿಸಿ ಆದೇಶಿಸಲಾಗಿರುತ್ತದೆ.
2. ಆಯ್ಕೆಯಾದ ಫಲಾಪೇಕ್ಷಿಗಳ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಬಗ್ಗೆ ನಿಗಮದ ಅಧಿಕಾರಿಗಳು ವರದಿ ತಯಾರಿಸಿಕೊಳ್ಳಬೇಕು. (ನಮೂನೆ – 1)
3. ಅರ್ಹರೆಂದು ಕಂಡು ಬಂದ ಎಲ್ಲಾ ಫಲಾಪೇಕ್ಷಿಗಳ ಪಟ್ಟಿಯನ್ನು ನಿಗಧಿಪಡಿಸಿದ ಗುತ್ತಿಗೆದಾರರಿಗೆ ನೀಡಿ, ಭೂ ಭೌತ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲು ತಿಳಿಸುವುದು.
4. ಜಮೀನಿನ ಮೇಲೆ ಬೋಜಾ ದಾಖಲಿಸಲು ನೀಡಿರುವ ಒಪ್ಪಿಗೆ ಪತ್ರವನ್ನು ಸಂಬಂಧ ಪಟ್ಟ ತಹಶಿಲ್ದಾರ್ ಕಛೇರಿಗೆ ನಮೂನೆ – 1(ಇ) ನಂತೆ ಕಳುಹಿಸಿ ತಲುಪಿದ ಬಗ್ಗೆ ಸ್ವೀಕೃತಿ ಪಡೆಯಬೇಕು ಮತ್ತು ನಿಗಮದ ಬೋಜಾ ದಾಖಲಾಗಿರುವ ಪಹಣಿ ಪತ್ರಿಕೆಯನ್ನು ತರಿಸಿ ಕಡತದಲ್ಲಿ ಜೋಡಿಸಿಕೊಳ್ಳುವುದು.
5. ನಿಗಮದ ಪರವಾಗಿ ಭೂ ದಾಖಲಾತಿಗಳಲ್ಲಿ ಭೋಜಾ ಮಾಡಿಸಿರುವ ನಂತರ ಭೂ ಭೌತ ಸಮೀಕ್ಷೆಯ ವರದಿ ಆಧಾರದಲ್ಲಿ ಕೊಳವೆಬಾವಿ ಕೊರೆಯುವಂತೆ ಕಾರ್ಯಾದೇಶ ನೀಡುವುದು. ಇದರಿಂದ ಮುಂದಿನ ಕ್ರಮಗಳಾದ ಪಂಪ್ ಸರಬರಾಜು ಇತ್ಯಾದಿ ಬಗ್ಗೆ ಆಗುತ್ತಿರುವ ವಿಳಂಬವನ್ನು ತಡೆಯಬಹುದಾಗಿದೆ.
6. ಕೊಳವೆ ಬಾವಿ ಕೊರೆಯುವ ಸಮಯದಲ್ಲಿ ನಿಗಮದ ತಾ.ಅ.ಅ/ಸಿಬ್ಬಂದಿ ಶೇ.100 ರಷ್ಟು, ಜಿಲ್ಲಾ ವ್ಯವಸ್ಥಾಪಕರು ಶೇ.50 ರಷ್ಟು ಮತ್ತು ವಿಭಾಗೀಯ ವ್ಯವಸ್ಥಾಪಕರು ಶೇ.10 ರಷ್ಟು ಪ್ರಕರಣಗಳಲ್ಲಿ ಸ್ಥಳದಲ್ಲಿ ಹಾಜರಿದ್ದ, ಕೊಳವೆಬಾವಿ ಕೊರೆದ ವಿವರಗಳನ್ನು ನಮೂನೆ – 3ರಲ್ಲಿ ನಿಖರವಾಗಿ ದಾಖಲಿಸಿಕೊಳ್ಳಬೇಕು. ಉಪಯೋಗಿಸಿದ ಕೇಸಿಂಗ್ ಪೈಪ್ ನಿಗದಿಪಡಿಸಿರುವ ದಪ್ಪ/ವಿಶಿಷ್ಟತೆ ಅನುಗುಣವಾಗಿರುವ ಬಗ್ಗೆ ದೃಢೀಕರಿಸಿಕೊಳ್ಳಬೇಕು. ಒಂದು ವೇಳೆ ವಿಶಿಷ್ಟತೆಗೆ ಅನುಗುಣವಾಗಿ ಇಲ್ಲದೇ ಇದ್ದಲ್ಲಿ ಅದನ್ನು ತಕ್ಷಣವೇ ಸಂಬಂಧಿಸಿದ ದಾಖಲಾತಿಗಳಲ್ಲಿ ನಮೂದಿಸುವುದು. ಕೊರೆಯುವಾಗ ನಿಗದಿತ 1000 ಜಿ.ಪಿ.ಹೆಚ್. ಗಿಂತ ಹೆಚ್ಚಿನ ಪ್ರಮಾಣದ ನೀರು ದೊರೆತ ಸಂದರ್ಭದಲ್ಲಿ ಛಾಯಾ ಚಿತ್ರ ತೆಗೆದು ನಮೂನೆ – 3(ಅ) ಜೊತೆ ಲಗತ್ತಿಸಿ ಕೇಂದ್ರ ಕಛೇರಿಗೆ ಕಳುಹಿಸುವುದು.
7. ವಿದ್ಯುತ್ ಸಂಪರ್ಕಕ್ಕಾಗಿ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು, ನೂತನವಾಗಿ ಅಭಿವೃದ್ಧಿ ಪಡಿಸಿರುವ ಮೊಬೈಲ್ ಆ್ಯಪ್‌ನಲ್ಲಿ ಪಂಪ್ ಮೋಟಾರ್ ಅಳವಡಿಸುವ ಸಂದರ್ಭದಲ್ಲಿ ಪೋಟೋವನ್ನು ತೆಗೆದು ಅಪ್‌ಲೋಡ್ ಮಾಡಿ ಆನ್‌ಲೈನಲ್ಲಿ ವಿದ್ಯುದ್ದೀಕರಣಕ್ಕೆ ಎಸ್ಕಾಂನಲ್ಲಿ ನೊಂದಣಿ ಮಾಡಿಸುವುದು.
8. ಈ ರೀತಿಯಾಗಿ ಕೊಳೆವೆ ಬಾವಿ ಕೊರೆದ ಬಗ್ಗೆ ತಯಾರಿಸಲಾದ ನಮೂನೆ – 3 ಮತ್ತು ಗುತ್ತಿಗೆದಾರರು ಸಲ್ಲಸಿರುವ ಬಿಲ್‌ಗಳನ್ನು ಸಂಬಂಧಪಟ್ಟ ದೃಢಿಕರಣಗಳ ನಂತರ ಕೇಂದ್ರ ಕಛೇರಿಗೆ ಇತರೇ ದಾಖಲಾತಿಗಳೊಂದಿಗೆ ಕಳುಹಿಸಬೇಕು.

9. ಬಿಲ್‌ಗಳನ್ನು ಕ್ರೋಡೀಕರಿಸಿ ಕೇಂದ್ರ ಕಛೇರಿ ಕಳುಹಿಸಲು ಫೋಷ್ವಾರೆಯೊಂದಿಗೆ ನಮೂನೆ – 3 ಇ ರಲ್ಲಿ ಕಳುಹಿಸಿಕೊಡಬೇಕು.
10. ಈ ಹಂತದಲ್ಲಿ ಬೇಕಾದ ಪಂಪ್ ಸೇಟ್ ಹಾಗು ಪೂರಕ ಸಾಮಗ್ರಿಗಳ ಲೆಕ್ಕಚಾರ ಮಾಡಿಕೊಂಡು ಮೊತ್ತವು ಉಳಿದಿರುವ ಸಹಾಯಧನ ಮತ್ತು ರೂ.50000/– ಅವಧಿ ಸಾಲ ಮೀರುವಂತಿದ್ದಲ್ಲಿ, ಹೆಚ್ಚುವರಿ ಮೊತ್ತವನ್ನು ಫಲಾನುಭವಿ ಪಾವತಿಸುವಂತೆ ತಿಳಿಸಬೇಕು.
    - ಲಭ್ಯವಿರುವ ಸಹಾಯಧನದಲ್ಲಿಯೇ ಆಗುವಂತಿದ್ದಲ್ಲಿ, ನಿಗಮದ ಹೆಸರು ದಾಖಲು ಮಾಡಿರುವ ಭೋಜಾ ರದ್ದುಪಡಿಸುವುದು ಹಾಗು ಪಂಪ್ ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಿಸುವುದು.
    - ಉಳಿದ ಸಹಾಯ ಧನ ಮತ್ತು ರೂ.50000/– ದವರೆಗೆ ಎಷ್ಟು ಬೇಕಾಗುತ್ತದೋ ಅಷ್ಟು ಅವಧಿಸಾಲ ಮಂಜೂರು ಮಾಡಿಕೊಂಡು ಪಂಪ್ ಸೆಟ್ ಸರಬರಾಜು ಮಾಡಿಸುವುದು.
    - ಅವಧಿ ಸಾಲ ರೂ.50000/–ಕ್ಕಿಂತ ಹೆಚ್ಚಿಗೆ ತಗಲುವುದಿದ್ದಲ್ಲಿ, ಈ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯಿಂದ ನಿಗಮಕ್ಕೆ ಪಾವತಿಸಿಕೊಂಡು, ರಶೀದಿ ನೀಡಿ ಪಂಪ್ ಸೆಟ್ ಸರಬರಾಜು ಮಾಡಿಸುವುದು.

11. ಕೊಳವೆಬಾವಿ ಕೊರೆಯುವಾಗ ಉಪಯೋಗಿಸುತ್ತಿರುವ ಕೇಸಿಂಗ್ ಪೈಪ್‌ಗಳನ್ನು 3ನೇ ತಪಾಸಣಾ ಸಂಸ್ಥೆಯಿಂದ ಪ್ರೀ ಡೆಲವರಿ ಮತ್ತು ಪೋಸ್ಟ್ ಡೆಲವರಿ ಪರಿಶೀಲನೆ ಮಾಡಲ್ಪಟ್ಟಿರುವ ಬಗ್ಗೆ ದೃಢೀಕರಣ ಪತ್ರ ಪಡೆಯಬೇಕು.
12. ಕೊಳವೆಬಾವಿ ಕೊರೆಯುವಾಗ ಒಂದು ವೇಳೆ ವಿಫಲವಾದಲ್ಲಿ ನಮೂನೆ–3ರಲ್ಲಿ ದಾಖಲಿಸಿಕೊಂಡು, ಜಿಲ್ಲಾ ಕಛೇರಿಯಲ್ಲಿ ದಾಖಲೆ ಇಟ್ಟುಕೊಳ್ಳಬೇಕು. ಇಂತಹ ವಿಫಲ ಕೊಳವೆಬಾವಿಗಳನ್ನು ಕೂಡಲೇ ಕಲ್ಲು ಮಣ್ಣುಗಳಿಂದ ಮುಚ್ಚಬೇಕು. ಫಲಾನುಭವಿಗೆ ಜಮೀನಿನ ಮೇಲೆ ದಾಖಲಾದ ಬೋಜಾ ರದ್ದುಪಡಿಸಲು ಸಂಬಂಧಪಟ್ಟ ತಹಶಿಲ್ದಾರರಿಗೆ ಪತ್ರ ಕಳುಹಿಸುವುದು.
13. ಜಿಲ್ಲಾ ಕೇಂದ್ರ ಕಛೇರಿಯಿಂದ ನೀಡಿರುವ ಕಾರ್ಯದೇಶದ ಆಧಾರದ ಮೇಲೆ ಪಂಪ್ ಸೆಟ್ ಗುತ್ತಿಗೆದಾರರು ಪಂಪ್ ಸೆಟ್ ಮತ್ತು ಪೂರಕಗಳನ್ನು ಸರಬರಾಜು ಮಾಡಲು ಬಂದಾಗ ಎಲ್ಲಾ ಸಾಮಗ್ರಿಗಳನ್ನು 3ನೇ ತಪಾಸಣಾ ಸಂಸ್ಥೆಯಿಂದ ಪ್ರೀ ಡೆಲವರಿ ಮತ್ತು ಪೋಸ್ಟ್ ಡೆಲವರಿ ಮಾಡಲ್ಪಟ್ಟಿರುವ ಬಗ್ಗೆ ದೃಢೀಕರಣ ಪತ್ರ ಪಡೆದುಕೊಳ್ಳಬೇಕು. ಸರಬರಾಜು ಮಾಡಿದಾಗ ನಿಗಧಿಪಡಿಸಿದ ನಮೂನೆ– 5ರಲ್ಲಿ ವಿವರಗಳನ್ನು ದಾಖಲಿಸಿಕೊಂಡು ಕೇಂದ್ರ ಕಛೇರಿಗೆ ಕಳುಹಿಸಬೇಕು, ಎಲ್ಲಾ ಪಂಪ್ ಸೇಟ್ ಮತ್ತು ಸಾಮಗ್ರಿಗಳ ಛಾಯಾಚಿತ್ರ ತೆಗೆದು ನಮೂನೆ – 5ಬಿ ನೊಂದಿಗೆ ಲಗತ್ತಿಸಿ ಕಳುಹಿಸಬೇಕು.
14. ಪಂಪ್ ಸೆಟ್ ಸರಬರಾಜು ಮಾಡಿದ ಬಗ್ಗೆ ಬಿಲ್ಲುಗಳನ್ನು ಕ್ರೊಡೀಕರಿಸಿ ನಮೂನೆ – 5(ಅ)ರ ಫೋಷ್ವಾರೆಯೊಂದಿಗೆ ಕೇಂದ್ರ ಕಛೇರಿಗೆ ಕಳುಹಿಸುವುದು.
15. ಪಂಪ್ ಸೇಟ್ ಮತ್ತು ಪೂರಕ ಸಾಮಗ್ರಿಗಳನ್ನು ವಿಳಂಬವಿಲ್ಲದೆ ಕೊಳವೆಬಾವಿ ಆಳವಡಿಸಿ ನಿಗದಿಪಡಿಸಿದ ನಮೂನೆ –5ರಲ್ಲಿ ಕೇಂದ್ರ ಕಛೇರಿಗೆ ಹಣ ಪಾವತಿಗಾಗಿ ಕಳುಹಿಸಬೇಕು.

ಅಳವಡಿಸಿದ ಬಗ್ಗೆ ಛಾಯಾಚಿತ್ರ ತೆಗೆದು ನಮೂನೆ – 5 (ಈ)ನೊಂದಿಗೆ ಲಗತ್ತಿಸಿ ಕಳುಹಿಸುವುದು.

16. ವಿದ್ಯುದ್ದೀಕರಣವಾದ ಒಂದು ತಿಂಗಳೊಳಗೆ ಸ್ಥಳ ಪರಿಶೀಲನೆ ನಡೆಸಿ ನಮೂನೆ – 6 ಮತ್ತು ನಮೂನೆ –7 ರಲ್ಲಿ ಕೇಂದ್ರ ಕಛೇರಿಗೆ ಪೂರ್ಣಗೊಂಡ ವರದಿ ಕಳುಹಿಸಬೇಕು.

17. ಪ್ರತಿ ತಿಂಗಳು ಕೇಂದ್ರ ಕಛೇರಿಗೆ ಕಳುಹಿಸಬೇಕಾದ ನಮೂನೆಗಳನ್ನು ಲಗತ್ತಿಸಿದೆ.
    ಅ. ವಿದ್ಯುದ್ದೀಕರಣದ ಪ್ರಗತಿ ನಮೂನೆ – 15 ಬಿ & ಸಿ ಕಳುಹಿಸುವುದು.
    ಆ. ಕೊಳವೆಬಾವಿ ಕೊರೆಯುವಿಕೆಯಲ್ಲಿ ಸಾಧಿಸಿದ ಪ್ರಗತಿ (ನಮೂನೆ –09)

## ಏತ ನೀರಾವರಿ ಯೋಜನೆ

1. ಈ ಯೋಜನೆಯಡಿ ಪ್ರತಿ ಘಟಕದಲ್ಲಿ ಕನಿಷ್ಠ 3 ಫಲಾನುಭವಿಗಳಿರಬೇಕು ಮತ್ತು ಕನಿಷ್ಠ 8 ಎಕರೆ ಹಾಗೂ ಗರಿಷ್ಠ 15 ಎಕರೆ ಖುಷ್ಕಿ ಜಮೀನು ಒಳಗೊಂಡಿರಬೇಕು.
2. ಘಟಕಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ಎಲ್ಲಾ ಜಮೀನು ಒಂದೇ ಕಡೆ ಇರುವ ಬಗ್ಗೆ ನಕಾಶೆಯನ್ನು ಭೂ ಮಾಪನಾ ಇಲಾಖೆಯಿಂದ ಧೃಢೀಕರಣ ಪತ್ರ ಪಡೆದು ಕಡತದಲ್ಲಿ ಇಡುವುದು.
3. ಫಲಾನುಭವಿಗಳಿಂದ ಅಗತ್ಯ ದಾಖಲಾತಿಗಳನ್ನು ಪಡೆದು, ದೃಢೀಕರಿಸಿ ಅವುಗಳನ್ನು ಕಡತದಲ್ಲಿ ಇಡುವುದು.
4. ಜಿಲ್ಲಾ ವ್ಯವಸ್ಥಾಪಕರು/ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಫಲಾಪೇಕ್ಷಿಗಳ ಅರ್ಹತೆ ಕುರಿತಂತೆ ಖುದ್ದು ಸ್ಥಳ ಪರಿಶೀಲನೆ ನಡೆಸಿ, ಪರಿಶೀಲಿಸಿ ವರದಿಯನ್ನು ಸಂಬಂಧಿಸಿದ ಘಟಕದ ಕಡತದಲ್ಲಿ ಇಡಬೇಕು.
5. ನೀರಾವರಿ ಇಲಾಖೆಯಿಂದ ನೀರು ಬಳಕೆ ಕುರಿತು ಪೂರ್ವಾನುಮತಿ ಪತ್ರ ಪಡೆಯಬೇಕು.
6. ವಿದ್ಯುತ್ ಸರಬರಾಜು ಕಂಪನಿಗಳಿಂದ ವಿದ್ಯುತ್ ಮಂಜೂರಾತಿ ಪತ್ರ ಪಡೆಯಬೇಕು.
7. ಯೋಜನೆಯಡಿ ನಿರ್ಮಿಸಲಾದ ಘಟಕಗಳ ಸ್ಥಳ ಪರಿಶೀಲನೆಯನ್ನು ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮತ್ತು ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರು ಜಂಟಿಯಾಗಿ ನಡೆಸಿ ವ್ಯವಸ್ಥಾಪಕ ನಿರ್ದೇಶಕರಿಗೆ ವರದಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿರುತ್ತದೆ. ಈ ರೀತಿಯಾಗಿ ಸಲ್ಲಿಸುವ ಜಂಟಿ ಸ್ಥಳ ಪರಿಶೀಲನಾ ವರದಿಯ ಆಧಾರದ ಮೇರೆಗೆ ಗುತ್ತಿಗೆದಾರರಿಗೆ ನಿಯಮಾನುಸಾರ ಹಣ ಪಾವತಿಗೆ ಕ್ರಮ ಕೈಗೊಳ್ಳಲಾಗುವುದು.
8. ಈಗಾಗಲೇ ಸಾಮೂಹಿಕ ನೀರಾವರಿ/ಏತ ನೀರಾವರಿ ಯೋಜನೆಯಡಿ ಅನುಷ್ಠಾನಗೊಂಡಿರುವ ಘಟಕಕ್ಕೆ ಮತ್ತೊಮ್ಮೆ ಸೌಲಭ್ಯದ ಪುನರಾವರ್ತನೆಯಾಗದಂತೆ ಎಚ್ಚರ ವಹಿಸುವುದು.

ನಿಗಮದ ವಿವಿಧ ಯೋಜನೆಗಳಡಿ ಅನುಸರಿಸಬೇಕಾದ ನೀತಿ ನಿಯಮಗಳ ಕುರಿತು ಈ ಕ್ರಿಯಾ ಯೋಜನೆಯಡಿ ನೀಡಲಾದ ಅಂಶಗಳಲ್ಲದೇ, ಹೆಚ್ಚಿನ ವಿವರಗಳನ್ನು ಕೇಂದ್ರ ಕಛೇರಿಯಿಂದ ಆಗಿಂದಾಗ್ಗೆ ನೀಡುವ ಸುತ್ತೋಲೆಗಳ/ಸರ್ಕಾರದ ಆದೇಶಗಳಲ್ಲಿ ತಿಳಿಸಿಲಾಗುವ ನೀತಿ ನಿಯಮಗಳನ್ನು ಅನುಸರಿಸಿಕೊಂಡು ಯೋಜನೆಗಳನ್ನು ಅನುಷ್ಠಾನಗೊಳಿಸತಕ್ಕದ್ದು.